**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ,**

**ಬ್ಯಾಡಗಿ.**

**ಸಿ.ಸಿ. ನಂ. 348/2022.**

**ಸಿ ಡಬ್ಲ್ಯೂ: 9**

**ಪಿ ಡಬ್ಲ್ಯೂ: 3**

| | | |
|---|---|---|
| ಹೆಸರು | : | ಪರಮೇಶ ನಾಗಣ್ಣನವರ |
| ತಂದೆಯ ಹೆಸರು | : | ಈರಪ್ಪ |
| ವಯಸ್ಸು | : | 36 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಬಡಮಲ್ಲಿ |

**ದಿನಾಂಕ: 22-11-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಎಪಿಪಿ ರವರಿಂದ:**

ಆರೋಪಿತರು ನನಗೆ ಗೊತ್ತು ಅವರು ನನಗೆ ಸಂಬಂಧಿಕರು. ಚಾಸಾ-1 ರವರು ಸಹ ನನ್ನ ಸಂಬಂಧಿಕರು. ಚಾಸಾ-6 ರಿಂದ 8 ರವರು ಸಹ ನನ್ನ ಸಂಬಂಧಿಕರು. ಚಾಸಾ-10 ರಿಂದ 12 ರವರು ನಮ್ಮ ಗ್ರಾಮದವರು. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಆರೋಪಿತರು ಹಾಗೂ ಚಾಸಾ-1, 6 ಮತ್ತು 7 ರವರ ಮಧ್ಯೆ ನಡೆಯಿತೆನ್ನಲಾದ ಗಲಾಟೆಯ ಬಗ್ಗೆ ನನಗೆ ಮಾಹಿತಿ ಇಲ್ಲ. ಪೋಲಿಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿಲ್ಲ.

**(ಈ ಹಂತದಲ್ಲಿ ಸ.ಸ.ಅ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಅವರಿಗೆ ಪಾಟೀ ಸವಾಲು ಮಾಡಲು ಅನುಮತಿಸಬೇಕೆಂದು ಕೇಳಿಕೊಂಡ ಮೇರೆಗೆ ಅನುಮತಿಸಲಾಗಿದೆ)**

**ಪಾಟೀ ಸವಾಲುಃ ಎಪಿಪಿ ರವರಿಂದಃ**

ದಿನಾಂಕ 26.08.2021 ರಂದು ನಾನು ಬೆಳಗಿನ ಸಮಯದಲ್ಲಿ ನಮ್ಮ ಗ್ರಾಮದ ಒಡ್ಡಿನ ಕೆರೆಯ ಏರಿಯ ಕೆಳಗಡೆ ಇರುವ ನಮ್ಮ ಜಮೀನಿನಲ್ಲಿ ಕೆಲಸ ಮಾಡುತ್ತಿರುವಾಗ ಮೃತ ಹೇಮನಗೌಡ ಅಂದರೆ ಚಾಸಾ-1 ರವರ ತಂದೆ ಸಾಗು ಮಾಡುತ್ತಿದ್ದ ಜಮೀನಿನಲ್ಲಿ ಬಹಳ ಜನ ಕೂಡಿ ಬಾಯಿ ಮಾಡುವ ಸಪ್ಪಳ ಕೇಳಿದ್ದರಿಂದ ನಾನು ಹಾಗೂ ನನ್ನ ಪಕ್ಕದ ಜಮೀನಿನ ಚಾಸಾ-8 ರವರು ಸದರಿ ಸ್ಥಳಕ್ಕೆ ಹೋದೆವು ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ ಹೇಮನಗೌಡ ಹಾಗೂ ಆತನ ಮಗ ಜೀವರಾಜ್ ಅಂದರೆ ಚಾಸಾ-1 ರವರು ಕೂಡಿ ಸದರಿ ಜಮೀನನ್ನು ರಂಟೆ ಹೊಡೆಯಲು ಎತ್ತಿಗೆ ರಂಟೆ ಕಟ್ಟುತ್ತಿದ್ದಾಗ ಆರೋಪಿತರೆಲ್ಲರೂ ಕೂಡಿಕೊಂಡು ಗುಂಪು ಕಟ್ಟಿಕೊಂಡು ಬಂದು ಅವರಿಗೆ ಹೊಲ ಹೊಡಿಬ್ಯಾಡ್ರಿ ಸೂಳೆ ಮಕ್ಕಳಾ ಅಂತಾ ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ನನಗೆ ಗೊತ್ತಿಲ್ಲ. ಹಾಗೂ ಎಲ್ಲರೂ ಕೂಡಿಕೊಂಡು ಚಾಸಾ-1 ರವರ ತಂದೆಯ ಮೈ-ಕೈಗೆ ಹೊಡೆದರು ಎಂದರೆ ನನಗೆ ಗೊತ್ತಿಲ್ಲ. ಹಾಗೂ 6 ನೇ ಆರೋಪಿತ ಚಾಸಾ-1 ರವರ ತಂದೆಗೆ ಚಪ್ಪಲಿಯಿಂದ ಹೊಡೆದ ಎಂದರೆ ನನಗೆ ಗೊತ್ತಿಲ್ಲ. ಹಾಗೂ ಸ್ಥಳಕ್ಕೆ ಬಂದ 3 ನೇ ಆರೋಪಿ ಚಾಸಾ-6 ಮತ್ತು 7 ರವರಿಗೆ ಕೈಯಿಂದ ಹೊಡೆದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಸಮಯಲದಲ್ಲಿ ನಾನು ಮತ್ತು ಚಾಸಾ8 ರವರು ಜಗಳ ಬಿಡಿಸಿದೆವು ಎಂದರೆ ಸರಿಯಲ್ಲ. ಹಾಗೂ ಸದರಿ ಜಗಳ ನಡೆಯಲು 9 ರಿಂದ 11 ನೇ ಆರೋಪಿತರ ಪ್ರಚೋಧನೆ ಕಾರಣ ಎಂದು ನನಗೆ ಗೊತ್ತಾಯಿತು ಎಂದರೆ ಸರಿಯಲ್ಲ. ಹಾಗೂ ಸದರಿ ದಿನ ಘಟನೆಯಾದಾಗ ಬೆಳಿಗ್ಗೆ 11.00 ಗಂಟೆ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ನಂತರ ಚಾಸಾ-1 ರವರ ತಂದೆ ಚಾಸಾ-1 ರವರೊಟ್ಟಿಗೆ ಹಾವೇರಿ ಜಿಲ್ಲಾ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದರು ಎಂದು ನನಗೆ ಗೊತ್ತಾಯಿತು ಎಂದರೆ ಸರಿಯಲ್ಲ. ಹಾಗೂ ದಿನಾಂಕಃ 29.08.2021 ರಂದು ಬೆಳಿಗ್ಗೆ 06.30 ರ ಸಮಯದಲ್ಲಿ ಚಾಸಾ-1 ರವರ ತಂದೆ ಹೇಮನಗೌಡನು ಜಮೀನಿಗೆ ನೊಗವನ್ನು ತರಲು

ಹೋದಾಗ ಆತನು ಚಾಸಾ-1 ರವರಿಗೆ ಫೋನ್ ಮಾಡಿ ಬಹಳ ತೊಂದರೆ ಆಗುತ್ತಿದೆ ಬಾ ಎಂದು ಹೊಲಕ್ಕೆ ಕರೆಯಿಸಿಕೊಂಡು ಆತನಿಗೆ ಆರೋಪಿತರು ಹಲ್ಲೇ ಮಾಡಿರುತ್ತಾರೆ ಎಂದು ಆತ ಚಾಸಾಾ-1 ರವರಿಗೆ ತಿಳಿಸಿದ ಎಂದರೆ ನನಗೆ ಗೊತ್ತಿಲ್ಲ. ಹಾಗೂ ಚಾಸಾ-1 ರವರ ತಂದೆಯನ್ನು ಚಾಸಾ-10 ರವರ ವಾಹನದಲ್ಲಿ ಜಿಲ್ಲಾ ಆಸ್ಪತ್ರೆಗೆ ಸಾಗಿಸಿದ ಬಗ್ಗೆ ಹಾಗೂ ಚಾಸಾ-1 ರವರ ತಂದೆ ಸದರಿ ಆಸ್ಪತ್ರೆಯಲ್ಲಿ ತೀರಿಕೊಂಡ ಬಗ್ಗೆ ನನಗೆ ತಿಳಿಯಿತು ಎಂದರೆ ಸರಿಯಲ್ಲ. ಹಾಗೂ ಈ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಸಂಗತಿಗಳನ್ನು ಸಾಕ್ಷಿ ಅಲ್ಲಗಳೆದಿದ್ದರಿಂದ ಸದರಿ ಹೇಳಿಕೆಯನ್ನು ನಿಪಿ-20 ಎಂದು ಗುರುತಿಸಲಾಯಿತು. ನಿಪಿ20 ರಂತೆ ಪೋಲಿಸರಿಗೆ ಹೇಳಿಕೆ ನೀಡಿದ್ದರೂ ಸಹ ನೀಡಿಲ್ಲ ಎಂದು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೆ.ಸರಿ ಇದೆ.

**Sd/-**

ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ ಬ್ಯಾಡಗಿ.